ಶ್ರೀ ಬಸವಾರಾಜ ಬೊಮ್ಮಾಯಿ
(ಜಲಸಂಪನ್ಮೂಲ ಸಚಿವರು)

ಅ) ಬಂದಿದೆ.

ಆ) ನೀರಿನ ಸೋರುವಿಕೆಯನ್ನು ತಡೆಗಟ್ಟಲು ಸ್ಟಾಪ್‌ಲಾಗ್ ಗೇಟುಗಳನ್ನು ಅಳವಡಿಸಿ ಅಗತ್ಯ ದುರಸ್ತಿ ಕ್ರಮಗಳನ್ನು ಕೈಗೊಳ್ಳಲಗಿದ್ದು, ನೀರಿನ ಸೋರುವಿಕೆಯ ಕಡಿಮೆಯಾಗಿರುತ್ತದೆ. ಪೂರ್ಣ ಪ್ರಮಾಣದಲ್ಲಿ ನೀರಿನ ಸೋರುವಿಕೆಯನ್ನು ತಡೆಗಟ್ಟುವ ದುರಸ್ತಿ ಕ್ರಮವು ಪ್ರಗತಿಯಲ್ಲಿದ್ದು, ರೈತರಿಗೆ ನೀರಿನ ಕೊರತೆಯುಂಟಾಗುವುದಿಲ್ಲ.

ಏತ ನೀರಾವರಿ ಕಾರ್ಯ ಪೂರ್ಣಗೊಳಿಸುವುದು
148 : (99)

ಶ್ರೀ ಕುಲಕರ್ಣಿಶ್ರೀಕಾಂತ ಸುಬ್ಬಾರಾವ್ (ಜಮಖಂಡಿ)

ಅ) ತುಂಗಳ–ಸಾವಳಗಿ ಏತ ನೀರಾವರಿ ಯೋಜನೆಯಡಿ ಉಳಿದ ಕಾಲುವೆ ಹೂಳೆತ್ತುವ ಉಪಕಾಲುವೆಗಳ ನಿರ್ಮಾಣ (ಎಫ್‌ಆಯ್‌ಸಿ) ಕಾರ್ಯಗಳನ್ನು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು;

ಆ) ಅಥಣಿ ತಾಲ್ಲೂಕಿನ ಹಲ್ಯಾಳದಲ್ಲಿ ಮೂರು ಪಂಪ ಸೆಟ್‌ಗಳನ್ನು ಯಾವಾಗ ಆಳವಡಿಸಲಾಗುವುದು?

ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ) ಹಿಪ್ಪರಗಿ ನೀರಾವರಿ ಯೋಜನೆಯಡಿಯಲ್ಲಿ ಬರುವ ಸಾವಳಗಿ ತುಂಗಳ ಏತ ನೀರಾವರಿ ಯೋಜನೆಗಳಿಂದ 1.41 ಟಿಎಂಸಿ ನೀರನ್ನು ಬಳಸಿ ಅಥಣಿ ಹಾಗೂ ಜಮಖಂಡಿ ತಾಲ್ಲೂಕಿನ 9 ಹಳ್ಳಿಗಳ 9045 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಯೋಜನೆಯಾಗಿದೆ. ತುಂಗಳ ಸಾವಳಗಿ ಏತ ನೀರಾವರಿ ಯೋಜನೆಯಲ್ಲಿ ಬರುವ ಎಲ್ಲ ಕಾಲುವೆ ಹಾಗೂ ಉಪ ಕಾಲುವೆಗಳಲ್ಲಿಯ ಹೂಗಳನ್ನು ತೆಗೆದು 2012–13ನೇ ಸಾಲಿನಲ್ಲಿ ನೀರನ್ನು ಹರಿ ಬಿಡಲಾಗಿದೆ. ಹೊಲಗಾಲುವೆ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಂಡು 2012–13ನೇ ಸಾಲಿನಲ್ಲಿ ಪೂರ್ಣಗೊಳಿಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಅ) ಹಲ್ಯಾಳ ಏತ ನೀರಾವರಿ ಯೋಜನೆಯ ಹಂತ–1ರಲ್ಲಿ ಒಟ್ಟು 4 ಪಂಪ್‌ಗಳನ್ನು (3+1 Standby) ಹಾಗೂ ಹಲ್ಯಾಳ ಏತ ನೀರಾವರಿ ಯೋಜನೆ ಹಂತ–2ರಲ್ಲಿ ಒಟ್ಟು 4 ಪಂಪ್‌ಗಳನ್ನು (3+1 Standby) ಈಗಾಗಲೇ ಅಳವಡಿಸಲಾಗಿದ್ದು, ನೀರನ್ನು ಹರಿಸಲಾಗುತ್ತಿದೆ. ಈಗ ಹೆಚ್ಚುವರಿಯಾಗಿ ಹಂತ–1 ಮತ್ತು 2ರಲ್ಲಿ ಹೆಚ್ಚುವರಿಯಾಗಿ 3 + 3 ಒಟ್ಟು 6 ಪಂಪ್‌ಗಳನ್ನು ಅಳವಡಿಸುವ ಕಾಮಗಾರಿಗೆ ವಿಭಾಗ ಕಛೇರಿಯಿಂದ ಟೆಂಡರ್ ಕರೆಯಲಾಗಿದೆ. ಟೆಂಡರ್ ತೆರೆದ ನಂತರ ಮೌಲ್ಯೀಕರಣ ವರದಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದುಕೊಂಡು ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುವುದು.

ಬೆಮ್ಮಡ ಏತ ನೀರಾವರಿ ಯೋಜನೆ

149 : (101)

ಶ್ರೀ ಕುಲಕರ್ಣಿ

ಅ) ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಹಾಗೂ ಹಿಪ್ಪರಗಿ ಜಲಾಶಯದಿಂದ ಏತ ನೀರಾವರಿ (ಚಿಮ್ಮಡ ಹತ್ತಿರ) ಮಾಡುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳಾವುವು;

ಆ) ಈ ಯೋಜನೆಯಿಂದ ಮುಧೋಳ, ಬೀಳಗಿ ಹಾಗೂ ಜಮಖಂಡಿ ತಾಲ್ಲೂಕಿನ ರೈತರಿಗೆ ಅನುಕೂಲವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕಾಂತ ಸುಬ್ಬಾರಾವ್ (ಜಮಖಂಡಿ)

ಅ) ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಹಾಗೂ ಹಿಪ್ಪರಗಿ ಜಲಾಶಯದಿಂದ ಏತ ನೀರಾವರಿ (ಚಿಮ್ಮಡ ಹತ್ತಿರ) ಮಾಡುವುದಕ್ಕೆ ಪ್ರಸ್ತಾವನೆಯು ತಯಾರಿಕೆ ಹಂತದಲ್ಲಿ ಇತ್ತು ತದನಂತರ ಸದರಿ ಪ್ರಸ್ತಾವನೆಯನ್ನು ಹಿಪ್ಪರಗಿ ಜಲಾಶಯದ ಹಿನ್ನೀರಿನಿಂದ ಸಸಾಲಟ್ಟಿ ಹತ್ತಿರ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳಲು ಸೂಕ್ತವೆಂದು ಪರಿಗಣಿಸಿ